# ಶಿಳ್ಳೆ ಬಾತುಕೋಳಿ

ಚಿತ್ರ –ಬರಹ:
**ಪ್ರಮೋದ ಹರಿಕಾಂತ**



**ಈ** ಬಾತುಕೋಳಿಗಳು ಹಾರುತ್ತವೆ, ಮನುಷ್ಯರಂತೆಯೇ ಶಿಳ್ಳೆ ಹೊಡೆಯುತ್ತವೆ. ಕರಾವಳಿ ಪ್ರದೇಶಗಳಲ್ಲಿ ವಿಶೇಷವಾಗಿ ಕಂಡು ಬರುವ ಈ ಪಕ್ಷಿಗಳ ಜೀವನ ಶೈಲಿಯೇ ವಿಭಿನ್ನ. ಇಂಗ್ಲಿಷ್‌ನಲ್ಲಿ ಇದನ್ನು 'ವಿಸಲಿಂಗ್ ಡಕ್' ಎಂದೇ ಕರೆಯುತ್ತಾರೆ. ಮರದ ಪೊಟರೆಗಳು ಇವುಗಳ ಸಂತಾನವೃದ್ಧಿಯ ತಾಣ. ಹಳ್ಳ, ಸಮುದ್ರ, ಕೆರೆ ಹೀಗೆ ರಭಸವಿಲ್ಲದ ನೀರಿನಲ್ಲಿ ಇವುಗಳ ಜೀವನ.

ಏಷ್ಯಾ ಖಂಡದಲ್ಲಿ ಹೆಚ್ಚಾಗಿ ಕಂಡು ಬರುವ ಈ ಬಾತುಕೋಳಿಗಳು, ಗೋವಾ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತೀರದಲ್ಲಿ ಹೆಚ್ಚಾಗಿವೆ. ಹಸಿರು ಮೈ ಬಣ್ಣ ಹಾಗೂ ಕಪ್ಪು ಬಣ್ಣದ ರೆಕ್ಕೆ ಇವುಗಳ ವಿಶೇಷ. ಮರಿಗಳಿಗೆ ಕಪ್ಪು ಮತ್ತು ಬಿಳಿ ಮಿಶ್ರಿತ ಮೈ ಬಣ್ಣ ಇರುತ್ತದೆ.

ಜೂನ್‌ನಿಂದ ಸೆಪ್ಟೆಂಬರ್ ಶಿಳ್ಳೆ ಬಾತುಕೋಳಿಗಳ ಸಂತಾನ ಕಾಲ. ಅದಕ್ಕಾಗಿ ಸಮುದ್ರ, ನದಿ, ಕೆರೆ ಹೀಗೆ ನೀರಿಗೆ ಹತ್ತಿರ ಇರುವ ಎತ್ತರದ ಮರದ ಪೊಟರೆಯಲ್ಲಿ ಗೂಡು ಕಟ್ಟುತ್ತವೆ. ಮೊಟ್ಟೆಯಿಂದ ಹೊರಬಂದ ಮರಿಗಳು ಸಾಮಾನ್ಯವಾಗಿ ಮೂರು ದಿನಕ್ಕೆ ಮೈಚಳಿ ಬಿಡುತ್ತವೆ. ಆಗ ತಾಯಿ ಬಾತುಕೋಳಿ ಸಮೀಪದ ನೀರಿರುವ ಜಾಗಕ್ಕೆ ಹೋಗಿ ಸಿಳ್ಳೆ ಹಾಕಿ ಮರಿಗಳಿಗೆ ಸೂಚನೆ ನೀಡುತ್ತದೆ. ತಕ್ಷಣ ಮರಿಗಳು ಗೂಡಿನಿಂದ ಜಾರಿ ನೀರಿನಲ್ಲಿ ಬಿದ್ದು ತಾಯಿಯನ್ನು ಸೇರುತ್ತದೆ. ನೀರಿನಲ್ಲಿ ತಾಯಿ ಜೊತೆ ಮರಿಗಳ ತುಂಟಾಟ ನೋಡುವುದೇ ಒಂದು ಆನಂದ.

ಶಿಳ್ಳೆ ಬಾತುಕೋಳಿಗಳಿಗೂ ಸಂಕಷ್ಟಗಳಿವೆ. ಇವು ಸ್ಥಳ ಬದಲಿಸುವಾಗ ಮರಿಗಳನ್ನು ಬೆನ್ನಮೇಲೆ ಕೂರಿಸಿಕೊಂಡು ಹಾರುತ್ತವೆ. ಹಾರುವಾಗ ಮರಿಗಳು ಆಕಸ್ಮಿಕವಾಗಿ ಜಾರಿ ಬಿದ್ದರೆ ಸಾಯುವುದೂ ಉಂಟು. ಕೆಲವೊಮ್ಮೆ ಮರಿಗಳೇ ಗೂಡಿನಲ್ಲಿ ಆಹಾರಕ್ಕಾಗಿ ಕಿತ್ತಾಡುವಾಗ ಜಾರಿ ಬಿದ್ದು ಗಾಯಗೊಳ್ಳುವುದಿದೆ. ಇಂತಹ ಬಹುತೇಕ ಸಂದರ್ಭಗಳಲ್ಲಿ ಮರಿಗಳು ಬೇರೆ ಪ್ರಾಣಿಗಳಿಗೆ ಆಹಾರ–ವಾಗುವುದೂ ಇದೆ ಎನ್ನುತ್ತಾರೆ ಬನವಾಸಿಯ ಪಕ್ಷಿ ವೀಕ್ಷಕ ಡಾ. ರಾಜೇಂದ್ರ.



